ಶ್ರೀ ಜೆ.ಆರ್. ಲೋಬೋ:– ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆಗಳ ಕಾಲ ಅವಕಾಶ ಕೊಡಬೇಕು.

ಅಧ್ಯಕ್ಷರು:– ಆಯಿತು. ಯು.ಬಿ. ಬಣಕಾರ್ ಅವರು.

10) ವಿಷಯ : ಹಿರೇಕೆರೂರು ತಾಲ್ಲೂಕಿನ ಹಲವು ಗ್ರಾಮಗಳಲ್ಲಿರುವ ಪ್ರಾಥಮಿಕ ಶಾಲೆಗಳಿಗೆ 2015–16 ನೇ ಸಾಲಿನಲ್ಲಿ 40 ಕೊಠಡಿಗಳನ್ನು ಮಂಜೂರು ಮಾಡುವ ಬಗ್ಗೆ.

*****

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):– ಹಿರೇಕೆರೂರು ಗ್ರಾಮಗಳಲ್ಲಿರುವ ಪ್ರಾಥಮಿಕ ಶಾಲೆಗಳಿಗೆ 2015–16 ನೇ ಸಾಲಿನಲ್ಲಿ 40 ಕೊಠಡಿಗಳನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ವಿನಯ್‌ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

2015–16 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಹಿರೇಕೆರೂರು ತಾಲ್ಲೂಕಿನ ಸರಕಾರಿ ಪ್ರಾಥಮಿಕ ಶಾಲೆಗಳಿಗೆ ಅಗತ್ಯವಿರುವ 10 ಹೆಚ್ಚುವರಿ ಕೊಠಡಿಗಳನ್ನು ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಮಂಜೂರು ಮಾಡುವಂತೆ ಜಿಲ್ಲೆಯಿಂದ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದರಲ್ಲಿ ಸದರಿ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಡೂರು ಇಲ್ಲಿಗೆ 02 ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದೆ. ರಾಜ್ಯವಲಯದಡಿ ಅನುದಾನದ ಲಭ್ಯತೆ ಮತ್ತು ಅಗತ್ಯತೆಯನ್ನು ಆಧರಿಸಿ ಕ್ರಮವಹಿಸಲಾಗುವುದು.

ಶ್ರೀ ಯು.ಬಿ. ಬಣಕಾರ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಕೊಠಡಿಗಳು ಬೇಕೆಂದು ನಮ್ಮ ಬೇಡಿಕೆಯಿರುವುದು. ಆದರೆ ನೀವು ಎರಡೆಂದು ಹೇಳಿದಿರಿ. ಆದಷ್ಟು ಬೇಗನೆ ಇನ್ನೂ ಹೆಚ್ಚಾಗಿ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ವಿನಯ್‌ಕುಮಾರ್ ಸೊರಕೆ:– ಮಾನ್ಯ ಸಚಿವರಿಗೆ ತಿಳಿಸುತ್ತೇವೆ.

ಅಧ್ಯಕ್ಷರು:– ಹೆಚ್.ಡಿ. ರೇವಣ್ಣ ನವರು, ನೋಡಿ ನೀವು ಎರಡೆರೆಡು ಸಾರಿ ಕೊಡುತ್ತಿದ್ದೀರಿ. ಇದು ತಪ್ಪಲ್ಲವೇ?

ಶ್ರೀ ಕೆ. ತಿಮ್ಮರಾಯಪ್ಪ:– ಮಾನ್ಯ ಅಧ್ಯಕ್ಷರೆ, ನನ್ನದು ನಂ. 3 ನೇದು ಹೇಳಿರುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಅದು ನನ್ನದಲ್ಲ.

ಅಧ್ಯಕ್ಷರು:– ಇನ್ನೊಂದು ಸಾರಿ ನಾನೇ ಸ್ಕೂಟಿನಿ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:– ಒಬ್ಬೊಬ್ಬರು ಒಂದು ತಂದರೆ ಸಾಕು. ಆದರೆ ನೀವು ಎರಡೆರಡನ್ನು ಹಾಕಿದರೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ:– ಸಾರ್, ಅದನ್ನು ಕೆ.ಎಂ. ಶಿವಲಿಂಗೇಗೌಡರು, ಚೆನ್ನರಾಯಪಟ್ಟಣದವರು ಹಾಕಿರುವುದು.

11) ವಿಷಯ : ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿರುವ ವಾಣಿಜ್ಯ ಮಳಿಗೆಗಳ ಬಾಡಿಗೆಯನ್ನು ಪರಿಷ್ಕರಿಸುವ ಬಗ್ಗೆ.

*****